ಸಾರಾಯಿಂಗೆ ಮಾರು ಹೋಗುತ್ತಾರೆ ಆ ರೀತಿಯಾಗಿ ಮಾರು ಹೋದರೆ ಭಟ್ಟಿ ಸಾರಾಯಿ ಮಂಠಾದವನ್ನು ಮನುಷ್ಯನು ಕುಡಿಯುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂತಹ ರೀತಿಯಲ್ಲಿ ತಯಾರು ಮಾಡುತ್ತಾರೆ. ಬೆಂಗಳೂರಿನಲ್ಲಿ ಕೂಡ ಇದನ್ನು ನೋಡಿದ್ದೇವೆ. ನೂರಾರು ಜನ ಭಟ್ಟಿ ಸಾರಾಯಿ ಕುಡಿದವರನ್ನು ನಾವು ಇಂದು ನೋಡಿದ್ದೇವೆ ಇಂತಹ ಪರಿಸ್ಥಿತಿಯಾಗಬಾರದು ಹಣ ಕೊಡುವಂತಹವನಿಗೆ ತೃಪ್ತಿಯಾಗತಕ್ಕಂತಹ ರೀತಿಯಲ್ಲಿ ಇದನ್ನು ವ್ಯವಸ್ಥೆ ಮಾಡಬೇಕು. ಆದರಲ್ಲಿ ಅನುಭವವಿರ ತಕ್ಕಂತಹವರು ಮತ್ತು ವ್ಯವಸ್ಥಿತವಾಗಿ ಅದನ್ನು ತಯಾರು ಮಾಡತಕ್ಕಂತಹವರು ಯಾರಿದ್ದಾರೆ ಅವರೆಲ್ಲರನ್ನೂ ಸೇರಿಸಿ ಅದರಲ್ಲಿ ನಮ್ಮ ಸದನ ಸದಸ್ಯರನ್ನೂ ಒಳಗೊಂಡಂತಹ ಒಂದು ಸಮಿತಿಯನ್ನು ಮಾಡಬೇಕೆಂಬ ಸಲಹೆಯನ್ನು ಏನು ಕೊಟ್ಟಿದ್ದಾರೆ ಅದನ್ನು ನಿಜವಾಗಲೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಸರಕಾರ ಇದರ ಬಗ್ಗೆ ತೀವ್ರವಾದಂತಹ ಯೋಚನೆ ಮಾಡಿ ತಡ ಮಾಡದೇ ಆದಷ್ಟು ಜಾಗ್ರತೆಯಾಗಿ ಮಾಡಬೇಕೆಂದು ಈ ನಿರ್ಣಯವನ್ನು ಸರಕಾರ ಒಪ್ಪಿ ಜನರಿಗೆ ಆಗತಕ್ಕಂತಹ ತೊಂದರೆಯನ್ನು ನಿವಾರಣೆಯಾಗುವುದಕ್ಕೆ ಸರಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನಾನು ಕೂಡ ಅವರು ತಂದಿರುವ ನಿರ್ಣಯಕ್ಕೆ ಬೆಂಬಲ ಸೂಚಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಅಧ್ಯಕ್ಷರು.— ಸಭೆಯನ್ನು ಮುಂದೂಡುವುದಕ್ಕೆ ಮೊದಲು ನಾಳ್ಕನೆಯ ಅಧಿವೇಶನದಲ್ಲಿ ನಡೆಸಲಾದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ನಾನು ನೀಡಲಿಚ್ಚಿಸುತ್ತೇನೆ.

ದಿನಾಂಕ ೨೯ನೇ ಜನವರಿ, ೧೯೮೭ ರಂದು ಪ್ರಾರಂಭವಾದ ಸದನವು ೧೩–೨–೧೯೮೭ ರಂದು ಮುಂದೂಡಲ್ಪಟ್ಟು ಮತ್ತೆ ೨೭–೨–೧೯೮೭ ರಂದು ಪುನರ್ ಆರಂಭವಾಗಿ ಈ ದಿನದವರೆಗೆ ಒಟ್ಟು ೩೮ ದಿನಗಳ ಕಾಲ ಸಮಾವೇಶಗೊಂಡಿದ್ದು ಅನೇಕ ಮುಖ್ಯ ವಿಷಯಗಳನ್ನು ಚರ್ಚಿಸಿತು.

ದಿನಾಂಕ ೨೯ನೇ ಜನವರಿ, ೧೯೮೭ ರಂದು ವಿಧಾನ ಸಭೆಯ ಸಭಾಂಗಣದಲ್ಲಿ ಸಮಾವೇಶಗೊಂಡ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಿದರು. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಶ್ರೀ ಎಂ. ಪಿ. ಪ್ರಕಾಶ್‌ರವರು ಸೂಚಿಸಿದ ಹಾಗೂ ಶ್ರೀ. ಕೆ. ರಾಮಯ್ಯ ನವರು ಅನುಮೋದಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಸಭೆಯು ಆರು ದಿನಗಳ ಕಾಲ ಚರ್ಚೆ ನಡೆದು ೧೩ನೇ ಫೆಬ್ರುವರಿ, ೧೯೮೭ನೇ ದಿನಾಂಕದಂದು ವಂದನಾರ್ಪಣೆಯ ಪ್ರಸ್ತಾವನ್ನು ಅಂಗೀಕರಿಸಲಾಯಿತು.

೧೯೮೭–೮೮ನೇ ಸಾಲಿಗೆ ಸಂಬಂಧಿಸಿದಂತೆ ಆಯವ್ಯಯ ಅಂದಾಜುಗಳನ್ನು ದಿನಾಂಕ ೨೭ನೇ ಫೆಬ್ರುವರಿ, ೧೯೮೭ ರಂದು ಮಂಡಿಸಲಾಯಿತು. ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ ನಾಲ್ಕು ದಿನಗಳ ಕಾಲ ಹಾಗೂ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಹತ್ತು ದಿನಗಳ ಕಾಲ ನಡೆಯಿತು.

೧೯೮೬–೮೭ನೇ ಇಸವಿಯ ಅನುಪೂರಕ ಅಂದಾಜುಗಳನ್ನು (ಎರಡನೆಯ ಕಂತು) ಸಭೆಯಲ್ಲಿ ೧೯ನೇ ಮಾರ್ಚ್ ೧೯೮೭ನೇ ದಿನಾಂಕದಂದು ಮಂಡಿಸಲಾಯಿತು ಹಾಗೂ ಅವುಗಳಿಗೆ ಸದನದ ಒಪ್ಪಿಗೆ ಪಡೆಯಲಾಯಿತು.

ಈ ಅವಧಿಯಲ್ಲಿ ೨೧೨೮ ಚುಕ್ಕೆ ಗುರುತಿನ ಪ್ರಶ್ನೆಗಳು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ೬೭೦ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸಲು ೧೧೫೦ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ೧೧೫೦ ಪ್ರಶ್ನೆಗಳಿಗೆ ಸಭೆಯು ಮುಂದಿಡಲಾಯಿತು.

೫೩ ಅಲ್ಪಕಾಲಾವಧಿ ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ ೧೬ ಅಂಗೀಕರಿಸಿದ್ದು ಅವುಗಳೆಲ್ಲವುಗಳನ್ನು ಉತ್ತರಿಸಲಾಯಿತು.

ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ೨೪೬ ಸೂಚನೆಗಳನ್ನು ಮಾನ್ಯ ಸದಸ್ಯರಿಂದ ಸ್ವೀಕರಿಸಿದ್ದು, ೫೫ ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡಿದರು.

ಅರ್ಧಗಂಟೆ ಕಾಲಾವಧಿ ಚರ್ಚೆ ನಡೆಸಲು ೯ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ ೨ ಸೂಚನೆಗಳನ್ನು ಸದನದಲ್ಲಿ ಚರ್ಚಿಸಲಾಯಿತು.

೪೦೬ ಸೂಚನೆಗಳನ್ನು ೩೩ ನಿಮಿಷಗಳ ನಿಯಮದ ಮೇರೆಗೆ ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ೨೫ ನಿಮಿಷಗಳನ್ನು ಇತ್ಯರ್ಥಗೊಳಿಸಲಾಯಿತು ೩೩ ನಿಮಿಷಗಳ ನಿಯಮದ ಮೇರೆಗೆ ಕೇಳಲಾಗುವ ವಿಷಯಗಳಿಗೆ ಉತ್ತರ ನೀಡಲು ಸರ್ಕಾರವು ಬದ್ಧವಲ್ಲದಿದ್ದರೂ ಸಹ ಹೆಚ್ಚಿನ ಪ್ರಕರಣಗಳಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆಯನ್ನು ನೀಡಿದರು.

೮ ನಿಲುವಳಿ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ ಯಾವುದನ್ನೂ ಅಂಗೀಕರಿಸಲಿಲ್ಲ.

೬೮ನೇ ನಿಯಮದ ಮೇರೆಗೆ ಅಲ್ಪಕಾಲಾವಧಿ ಚರ್ಚೆಗಾಗಿ ೧೮ ಸೂಚನೆಗಳನ್ನು ಸ್ವೀಕರಿಸಿದ್ದು ಅವುಗಳಲ್ಲಿ ಎರಡನ್ನೂ ಸದನದಲ್ಲಿ ಚರ್ಚಿಸಲಾಗಿದೆ.

ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ೭ ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ ಸೂಚನೆಗಳನ್ನು ಹಕ್ಕುಬಾಧ್ಯತಾ ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸಲಾಯಿತು.

ಈ ಅಧಿವೇಶನದ ಕಾಲಾವಧಿಯಲ್ಲಿ ೩೨ ವಿಧೇಯಕಗಳನ್ನು ಮಂಡಿಸಿ ೩೦ ವಿಧೇಯಕಗಳನ್ನು ಅಂಗೀಕರಿಸಲಾಯಿತು. ಒಂದು ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಗೆ ಕಳುಹಿಸಲಾಯಿತು.

೨ ದಿನಗಳ ಮಟ್ಟಿಗೆ ಖಾಸಗಿ ಕಾರ್ಯಕಲಾಪವನ್ನು ಸದನದಲ್ಲಿ ನಡೆಸಲಾಯಿತು ಹಾಗೂ ಸ್ವೀಕರಿಸಲಾದ ೧೧ ನಿರ್ಣಯಗಳ ಪೈಕಿ ಕೇವಲ ೧ ಮಾತ್ರ ಮಂಡಿಸಿದ್ದು ಅದರ ಮೇಲಿನ ಚರ್ಚೆ ಅಪೂರ್ಣಗೊಂಡಿತು.

ಸದನದ ಮುಂದೆ ೧೩೩ ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಈ ಅವಧಿಯಲ್ಲಿ ಸದನಕ್ಕೆ ೬೭ ಮನವಿಗಳನ್ನೊಪ್ಪಿಸಲಾಯಿತು.

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ೩ ವರದಿಗಳನ್ನು, ಅಂದಾಜು ಸಮಿತಿಯು ಮೂರು ವರದಿಗಳನ್ನು ಸಾರ್ವಜನಿಕ ಉದ್ದಿಮೆಗಳ ಸಮಿತಿಯು ೨ ವರದಿಗಳನ್ನು, ಖಾಸಗಿ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಯು ೫ ವರದಿಗಳನ್ನು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯು ೨ ವರದಿಗಳನ್ನು, ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡ ಜಾತಿಗಳ ಕಲ್ಯಾಣ ಸಮಿತಿಯು ೨ ವರದಿಗಳನ್ನು, ಅಧೀನ ಶಾಸನ ರಚನಾ ಸಮಿತಿಯು ೧ ವರದಿಯನ್ನು, ಸರ್ಕಾರಿ ಭರವಸೆಗಳ ಸಮಿತಿಯು ೧ ವರದಿಯನ್ನು, ಮನವಿಗಳ ಸಮಿತಿಯು ೧ ವರದಿಯನ್ನು. ಹಕ್ಕುಭಾಧ್ಯತಾ ಸಮಿತಿಯು ಒಂದು ವರದಿಯನ್ನು ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಯು ೧ ವರದಿಯನ್ನು ಸದನಕ್ಕೊಪ್ಪಿಸಲಾಯಿತು.

ವಿವಿಧ ಸಮಿತಿಗಳಿಗೆ ಸಂಬಂಧಿಸಿದಂತೆ ಚುನಾವಣೆ ಪ್ರಸ್ತಾವಗಳನ್ನು ಮಂಡಿಸಲಾಯಿತು.

ಈಗ ಸದನದ ಸಮಿತಿಗಳಿಗೆ ಸಂಬಂಧಪಟ್ಟ ಚುನಾವಣೆಯ ಬಗ್ಗೆ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳು ಒಮ್ಮತಕ್ಕೆ ಬಂದು ಸರ್ವಸಮ್ಮತವಾದ ಒಂದು ಪಟ್ಟಿಯನ್ನು ನೀಡಿದ್ದಾರೆ. ಆದ್ದರಿಂದ ಈ ಬಗ್ಗೆ ಚುನಾವಣೆಗಳು ಇರುವುದಿಲ್ಲ. ವಿವಿಧ ಸಮಿತಿಗಳ ಸದಸ್ಯರುಗಳ ಪಟ್ಟಿ ಈ ರೀತಿ ಇರುತ್ತದೆ.

೧. ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ

ಶ್ರೀಯುಂತರುಗಳಾದ.—

೧ ಬಿ. ಬಸವಯ್ಯ
೨ ವಿಶ್ವನಾಥ ರೆಡ್ಡಿ ಮುದ್ನಾಳ್
೩ ಎನ್. ಗಂಗಾಧರ್
೪ ಎನ್. ಹೆಚ್. ಗೌಡ
೫ ಟಿ. ಬಿ. ಬಾಳೇಕಾಯಿ
೬ ಕೃಷ್ಣಮೂರ್ತಿ
೭ ಹೆಚ್. ವಿಕಾಂತಯ್ಯ
೮ ಬಾಬುರೆಡ್ಡಿ ವಿ. ತುಂಗಾಳ್
೯ ಕೆ. ಹೆಚ್. ಶ್ರೀನಿವಾಸ್
೧೦ ಎಸ್. ಪುಟ್ಟಸ್ವಾಮಿ
೧೧ ಎಂ. ಪಿ. ಕೇಶವಮೂರ್ತಿ
೧೨ ಎಂ. ಎಲ್. ಉಸ್ತಾದ್

೨. ಅಂದಾಜು ಸಮಿತಿ

ಶ್ರೀಯುತರುಂಗಳಾದ.—

೧ ಎಸ್. ಎಸ್. ಕಡಪಟ್ಟಿ
೨ ಡಾ॥ ಹುಂಬರವಾಡಿ
೩ ಎಸ್. ಡಿ. ಜಯರಾಮ್
೪ ಶ್ರೀಮತಿ ಶಿವಕಾಂತ ಚತುರೆ
೫ ಐ. ಬಿ. ಶಂಕರ್
೬ ಪೂರ್ಣಮುತ್ತಪ್ಪ
೭ ವೇದಾಂತ ಹೆಮ್ಮಿಗೆ
೮ ಹೆಚ್. ಬಿ. ದ್ಯಾವರಪ್ಪ
೯ ಕೆ. ಪಿ, ಮಾಗೆಣ್ಣವರ್
೧೦ ಕೆ. ಬಿ. ಶಾಣಪ್ಪ
೧೧ ಕೆ. ಜೆ. ಜಾರ್ಜ್
೧೨ ಜಿ ರಾಮದಾಸ್
೧೩ ವೀರಕುಮಾರ್ ಎ. ಪಾಟೀಲ್
೧೪ ಬಸವರಾಜ್ ಹಾವಗಪ್ಪ ಪಾಟೀಲ್
೧೫ ಬಿ. ಬಿ. ನಿಂಗಯ್ಯ

೩. ಅಧೀನ ಶಾಸನ ರಚನಾ ಸಮಿತಿ

ಶ್ರೀಯುತರುಂಗಳಾದ.—

೧ ಪಿ. ಎಂ. ಚಿಕ್ಕಬೋರಯ್ಯ
೨ ಪಂಪಾಪತಿ
೩ ಅಮರಪ್ಪ ನಾಯಕ್
೪ ಆರ್. ಎಸ್. ಪಾಟೀ
೫ ಜಿ. ಎಸ್. ದೊಡ್ಡಮೇಟಿ
೬ ಶರಣಬಸಪ್ಪ ಎಂ. ಪಾಟೀಲ್
೭ ಪಟವಂಕ್ಕಿ ರತ್ನಾಕರ್
೮ ಸಿ. ಪಿ. ಮುಡಲಗಿರಿಯಪ್ಪ

೪. ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ

ಶ್ರೀಯುತರುಂಗಳಾದ.—

೧ ತಿಪ್ಪೇಸ್ವಾಮಿ (ಚಿಕ್ಕಬಳ್ಳಾಪುರ)
೨ ಕೆ. ಎಸ್. ಬಸವರಾಜ್
೩ ಆರ್. ಎಂ. ಪಾಟೀಲ್
೪ ಬಿ. ಕೆ. ನೀಲಕಂಠಪ್ಪ
೫ ಶ್ರೀಮತಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡ
೬ ಟಿ. ಎಸ್. ಮಣಿ
೭ ಜಿ. ರಾಮಕೃಷ್ಣ
೮ ಶ್ರೀರಂಗ ದೇವರಾಯಲು
೯ ಬಸವರಾಜ್ (ಬ್ರಹ್ಮಾವರ್)

೫. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ

ಶ್ರೀಯುಂತರಂಗಳಾದ.—

೧ ಡಾ॥ ಬಿ. ಎಂ. ತಿಪ್ಪೇಸ್ವಾಮಿ
೨ ಡಿ. ಎ. ಬಿಸ್ವಪ್ಪ
೩ ಎಂ. ಜಿ. ಫಡ್ತಿ
೪ ಶಿವಪುತ್ರಪ್ಪ ಬೇಸಾಯಿ
೫ ಚಂದ್ರಕಾಂತ ಬೆಲ್ಲದ್
೬ ಹೆಚ್. ಕೆ ಕುಮಾರಸ್ವಾಮಿ
೭ ಗೋಪಾಲ ಮುಕುಂದ ಕಾನಡೆ
೮ ಎಂ. ಕೆ. ಕುಲಕರ್ಣಿ
೯ ಬ್ಲೇಸಿಯಸ್ ಎಂ. ಡಿಸೋಜ

೬. ಹಕ್ಕು ಬಾಧ್ಯತಾ ಸಮಿತಿ

ಶ್ರೀಯುತರುಗಳಾದ.—

೧ ಜಿ. ಎಸ್. ಬಾಗಲ್‌ಕೋಟ್
೨ ಎಸ್. ಹೆಚ್. ಕೌಜಲಗಿ
೩ ಹೆಚ್. ಜಿ. ಚಿನ್ನಪ್ಪ
೪ ಎ. ಬಿ. ದೇಸಾಯಿ
೫ ಬಿ. ಎ. ಉಮರಬ್ಬ
೬ ಬಿ. ಲಕ್ಕಪ್ಪ
೭ ಬಿ. ಬಸವಲಿಂಗಪ್ಪ

೭. ಸರ್ಕಾರಿ ಭರವಸೆಗಳ ಸಮಿತಿ

ಶ್ರೀಯುತರುಗಳಾದ.—

೧ ಬಿ. ಜಿ. ಕೊಟ್ರಪ್ಪ
೨ ಈ. ನಂಜೇಗೌಡ
೩ ಶ್ರೀಮತಿ ಶಕುಂತಲಾ ಚೌಗಲೆ
೪ ಕೆ. ಆರ್. ಶ್ರೀನಿವಾಸಯ್ಯ
೫ ಎ. ಕೃಷ್ಣಪ್ಪ
೬ ಶಿವಶೆಂಬಿರಪ್ಪ ಸಿರ್‌ಪಾಳ್
೭ ಶ್ರೀಮತಿ ಮುಖ್ತಿರ್ ಉನ್ನಿಸಾ
೮ ಜಿ. ರಾಜೂಗೌಡ

೮. ವಸತಿ ಸಮಿತಿ

ಶ್ರೀಯುತರುಗಳಾದ.—

೧ ಎಂ. ಡಿ. ಬಿರಾದಾರ್
೨ ಗೌಲಿ ಮಹದೇವಪ್ಪ
೩ ಹೆಚ್. ಸಿ. ಮಹದೇವಪ್ಪ
೪ ಕೆ. ಹೆಚ್. ರಾಮಕೃಷ್ಣಯ್ಯ
೫ ಶಿವರಾಮ ರೆಡ್ಡಿ
೬ ಎಂ. ರಾಮಪ್ಪ
೭ ಸಿ. ಕಣ್ಣನ್
೮ ಎಸ್. ಜೆ. ನಂಜಯ್ಯನ ಮಠ್

೯. ಸಾರ್ವಜನಿಕ ಉದ್ಯಮಗಳ ಸಮಿತಿ

ಶ್ರೀಯುತರುಗಳಾದ.—

೧ ಎ. ರಮೇಶ್ ಕುಮಾರ್
೨ ಆಗಡಿ ಸಂಗಣ್ಣ ವಿರೂಪಾಕ್ಷಪ್ಪ
೩ ಕೆ. ವೆಂಕಟೇಶ್
೪ ಬಿ. ಗುರುಪ್ರಸಾದ್
೫ ಆರ್. ಟಿ. ದೇಸಾಯಿ
೬ ಬಿ. ಎಸ್. ಯಡಿಯೂರಪ್ಪ
೭ ಹೆಚ್. ಡಿ. ಚೌಡಯ್ಯ
೮ ಶ್ರೀಮತಿ ಮನೋರಮಾ ಮಧ್ವರಾಜ್
೯ ವಂಲ್ಲಾರಿಗೌಡ ಎಸ್. ಪಾಟೀಲ್

೧೪. ಖಾಸಗಿ ಸದಸ್ಯರ ವಿಧೇಯಕ ಮತ್ತು ನಿರ್ಣಯಗಳ ಸಮಿತಿ

ಶ್ರೀಯುತರುಗಳಾದ.—

೧ ಬಿ. ಎನ್. ಬಚ್ಚೇಗೌಡ
೨ ಉಮೇಶ್ ವಿ. ಕಟ್ಟಿ
೩ ಬಿ. ಬಿ ಹಿರೇ ರೆಡ್ಡಿ
೪ ಎನ್. ಎಸ್. ಖೇಡ್
೫ ಕೆ. ಟಿ. ರಾಮಸ್ವಾಮಿ
೬ ಆರ್. ರೋಶನ್ ಬೇಗ್
೭ ಕೆ. ಎಂ. ಮುನಿಯಪ್ಪ
೮ ರಾಮನಾಥ್ ರಾಯ್
೯ ಆರ್. ರಾಮಯ್ಯ
೧೦ ಆರ್. ಎನ್. ನಾಯಕ್

ಸಭೆಯಲ್ಲಿ ನಡೆಸಿದ ಕಾರ್ಯಕಲಾಪಗಳು ನೋಡಿದ ಪಕ್ಷದಲ್ಲಿ, ಸಾಕಷ್ಟು ಗಣನೀಯವಾಗಿ ಹಾಗೂ ಹೆಚ್ಚಾಗಿ ವಿಷಯಗಳು ಪ್ರಸ್ತಾಪವಾಗಿರುವುದು ಕಂಡು ಬರುತ್ತದೆ. ಕೆಲವು ದಿವಸಗಳಂದು ಸಭೆಯು ಬೆಳಿಗ್ಗೆಯಿಂದ ರಾತ್ರಿ ಬಹಳ ಹೊತ್ತಿನವರೆವಿಗೂ ಕಾರ್ಯಕಲಾಪಗಳನ್ನು ನಡೆಸಿತು ಹಾಗೂ ಈ ದಿಸೆಯಲ್ಲಿ ಸದಸ್ಯರುಗಳು ಹೆಚ್ಚು ಸಮಯದವರೆಗೂ ಅಧಿವೇಶನವನ್ನು ನಡೆಸಲು ನೀಡಿದ ಸಹಕಾರಕ್ಕಾಗಿ ನಾನು ಬಹಳ ಸಂತೋಷ ವ್ಯಕ್ತಪಡಿಸುತ್ತೇನೆ.

ಸಭಾ ನಾಯಕರು, ವಿರೋಧ ಪಕ್ಷದ ನಾಯಕರು, ಹಾಗೂ ಮಾನ್ಯ ಮಂತ್ರಿಗಳು, ಎಲ್ಲಾ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರೆಲ್ಲರೂ ನೀಡಿದ ಸಹಕಾರಕ್ಕಾಗಿ ನಾನು ಅವರಿಗೆಲ್ಲ ಮನಃಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ನನಗೆ ಸಹಕಾರ ನೀಡಿದ ಪತ್ರಿಕಾ ಪ್ರತಿನಿಧಿಗಳಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ತಮಗೆಲ್ಲರಿಗೂ ಮತ್ತೊಮ್ಮೆ ನನ್ನ ಧನ್ಯವಾದಗಳು. ಸಭೆಯ ಕಾರ್ಯಕಲಾಪಗಳನ್ನು ಅನಿರ್ದಿಷ್ಟ ಕಾಲದವರೆಗೆ ಈಗ ಮುಂದೂಡಲಾಗಿದೆ.

(ಸಭೆಯು ೬.೧೫ಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)